# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು, ಬೆಂಗಳೂರು-560 002

ಸಂಖ್ಯೆ: ಬಿ12(ಸಿ1)/ಸಿಜಿ/ಪಿಆರ್/[illegible]/2022-23 ದಿನಾಂಕ:

eoffice No. 36270

## ನೇಮಕಾತಿ ಆದೇಶ

ವಿಷಯ: ದಿವಂಗತ ಶ್ರೀ ಬಿ.ಎನ್.ಲಕ್ಷ್ಮೀನಾರಾಯಣ, ಕೆಲಸ ಪರಿವೀಕ್ಷಕರು ರವರ ಮಗನಾದ ಶ್ರೀ ಚೇತನ್‌ರಾಜ್.ಬಿ.ಎಲ್ ರವರನ್ನು ಅನುಕಂಪದ ಆಧಾರದ ಮೇಲೆ ಕಂದಾಯ ವಸೂಲಿಗಾರರು ಹುದ್ದೆಗೆ ನೇಮಕಾತಿ ಮಾಡುವ ಬಗ್ಗೆ.



ಉಲ್ಲೇಖ: 1) ಸರ್ಕಾರಿ ಆದೇಶದ ಪತ್ರ ಸಂಖ್ಯೆ: ಡಿಪಿಎಆರ್ 100 ಎಸ್‌ಸಿಎ 95, ದಿ: 12-09-1996.
2) ಸದರಿ ಅರ್ಜಿದಾರರ ಮನವಿ ಪತ್ರದ ದಿನಾಂಕ: 10-02-2023
3) ಪೊಲೀಸ್ ಇನ್ಸ್‌ಪೆಕ್ಟರ್, ನಗರ ವಿಶೇಷ ಶಾಖೆ, ಆಡಳಿತ, ಪೊಲೀಸ್ ಕಮೀಷನರ್ ರವರ ಪರವಾಗಿ ದೃಢೀಕರಣ ಪತ್ರ ದಿ: 17-03-2023
4) ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತನಗರ) ಉಪ ವಿಭಾಗ ರವರ ಸ್ಥಳ ಮಹಜರ್ ವರದಿ ದಿ: 24-04-2023
5) ಸಹಾಯಕ ಕಂದಾಯ ಅಧಿಕಾರಿ (ಜಗಜೀವನರಾಮ ನಗರ) ವಲಯ ರವರ ದೃಢೀಕರಣ ಪತ್ರ ವರದಿ ದಿ:28-03-2023.
6) ವಲಯ ಜಂಟಿ ಆಯುಕ್ತರು (ಪೂರ್ವ) ವಲಯ ರವರ ಅಧ್ಯಕ್ಷತೆಯಲ್ಲಿ ದಿ:23-06-2023 ರಂದು ನಡೆದ ಅನುಕಂಪದ ಆಧಾರದ ನೇಮಕಾತಿ ಸಮಿತಿಯ ನಡವಳಿಗಳು.
7) ಉಪ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿ: 31-08-2023 ಹಾಗೂ 07-12-2023 ರಂದು ನಡೆದ ಅನುಕಂಪದ ಆಧಾರದ ನೇಮಕಾತಿ ಸಮಿತಿಯ ನಡವಳಿಗಳು.
8) ಪ್ರಾಂಶುಪಾಲರು, East West Polytechnic, Near BEL Layout, off Magadi Road, ಬೆಂಗಳೂರು ರವರ ಪತ್ರ EWP/2023/CE/525 ದಿ:25-09-2023

---------

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಕಂಪದ ಆಧಾರದ ನೇಮಕಾತಿ ಕೋರಿ ಸಲ್ಲಿಸಲಾದ ಮನವಿಯನ್ನು ಪರಿಶೀಲಿಸಿ, ಜಂಟಿ ಆಯುಕ್ತರು (ಪೂರ್ವ) ವಲಯ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 23-06-2023 ರಂದು ನಡೆದ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಮತ್ತು ಚರ್ಚಿಸಿ, ತೆಗೆದುಕೊಂಡಿರುವ ತೀರ್ಮಾನದಂತೆ, ದಿವಂಗತ ಶ್ರೀ ಬಿ.ಎನ್.ಲಕ್ಷ್ಮೀನಾರಾಯಣ, ಕೆಲಸ ಪರಿವೀಕ್ಷಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ) ಉಪ ವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಸೇವೆಯಲ್ಲಿರುವಾಗಲೇ ಮೃತರಾಗಿದ್ದು, ಸದರಿಯವರ ಮಗನಾದ ಶ್ರೀ ಚೇತನ್‌ರಾಜ್.ಬಿ.ಎಲ್ ರವರು Diploma in Civil Engineering ವಿದ್ಯಾರ್ಹತೆ ಹೊಂದಿರುವುದರಿಂದ ಗ್ರೂಫ್ 'ಸಿ' ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಉಪ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:31-08-2023 ಹಾಗೂ 07-12-2023 ರಂದು ನಡೆದ ಅನುಕಂಪದ ಆಧಾರದ ಮೇಲೆ ನೇಮಕಾತಿ ಅಂತಿಮ ಪರಿಶೀಲನಾ ಸಮಿತಿ ಸಭೆಯಲ್ಲಿ ಶ್ರೀ ಚೇತನ್‌ರಾಜ್.ಬಿ.ಎಲ್ ರವರನ್ನು ಗ್ರೂಫ್ 'ಸಿ' ಹುದ್ದೆಯಾದ ಕಂದಾಯ ವಸೂಲಿಗಾರರು ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಮಿತಿಯ ತೀರ್ಮಾನದ ನಡವಳಿಯನ್ನು ನೇಮಕಾತಿ ಪ್ರಾಧಿಕಾರಿಯಾದ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು ಅನುಮೋದಿಸಿರುತ್ತಾರೆ. .

ಶ್ರೀ ಚೇತನ್‌ರಾಜ್.ಬಿ.ಎಲ್ ಬಿನ್ ದಿವಂಗತ ಶ್ರೀ ಬಿ.ಎನ್.ಲಕ್ಷ್ಮೀನಾರಾಯಣ ರವರ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | | |
|---|---|---|
| 1. | ಹೆಸರು | ಶ್ರೀ ಚೇತನ್‌ರಾಜ್.ಬಿ.ಎಲ್ |
| 2. | ಜನ್ಮ ದಿನಾಂಕ | 28-04-1997 ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ, ರಿ.ನಂ.20140817388) |
| 3. | ವಿಳಾಸ | ನಂ.397, 18ನೇ ಮೈನ್, 19ನೇ ಕ್ರಾಸ್, ಗಂಗಮ್ಮ ಟೆಂಪಲ್ ಹತ್ತಿರ, ಜೆ.ಜೆ.ಆರ್ ನಗರ ಗಾರ್ಡನ್, ಬೆಂಗಳೂರು-560026 |
| 4. | ಪ್ರವರ್ಗ | ಪರಿಶಿಷ್ಟ ಜಾತಿಗಳು (ಆದಿ ಕರ್ನಾಟಕ) (ದಿ:18-02-2021 ರಂದು ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರು ವಿತರಿಸಿರುವ ಜಾತಿ ಪ್ರಮಾಣ ಪತ್ರ) |

ಉಲ್ಲೇಖ-(1)ರ ಸರ್ಕಾರಿ ಆದೇಶದ ಅನ್ವಯ ಹಾಗೂ ಉಲ್ಲೇಖ-(2) ರಿಂದ (5)ರ ವರೆಗಿನ ದಾಖಲಾತಿಗಳು ಮತ್ತು ವರದಿಗಳನ್ನಾಧರಿಸಿ ಉಲ್ಲೇಖ-(6) ಮತ್ತು (7)ರ ಸಭೆ ನಡವಳಿಗಳ ತೀರ್ಮಾನದಂತೆ, ಸದರಿಯವರನ್ನು ಅನುಕಂಪದ ಆಧಾರದ ಮೇಲೆ ವೇತನ ಶ್ರೇಣಿ ರೂ.21400-42000ರಲ್ಲಿ ಗ್ರೂಪ್ "ಸಿ" ದರ್ಜೆಯಲ್ಲಿ (ಕಂದಾಯ ವಸೂಲಿಗಾರರು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಉಪ ವಿಭಾಗ ಕಛೇರಿಯಲ್ಲಿ ಖಾಲಿ ಇರುವ ಕಂದಾಯ ವಸೂಲಿಗಾರರು ಹುದ್ದೆಗೆ ಈ ಕೆಳಕಂಡ ಷರತ್ತಿಗಳಿಗೊಳಪಡಿಸಿ ನೇಮಕಾತಿ ಮಾಡಿದೆ.

ಪು.ತಿ.ನೊ...

**ಷರತ್ತುಗಳು**

1) ಶ್ರೀ ಚೇತನ್‌ರಾಜ್.ಬಿ.ಎಲ್ ಬಿನ್ ದಿವಂಗತ ಶ್ರೀ ಬಿ.ಎನ್.ಲಕ್ಷ್ಮೀನಾರಾಯಣ, ಇವರು ಕಂ ವಸೂಲಿಗಾರರು ಹುದ್ದೆಗೆ ಈ ಪತ್ರ ತಲುಪಿದ 7 ದಿವಸಗಳೊಳಗಾಗಿ, ದೇಹದಾರ್ಢ್ಯತೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರಮಾಣ ಪತ್ರ ಮತ್ತು ಇತರೇ ಮೂಲ ದಾಖಲಾತಿಗಳೊ ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಉಪ ವಿಭಾಗ ರವರ ಬಳಿ ಕರ್ತ ಹಾಜರಾಗತಕ್ಕದ್ದು. ಕರ್ತವ್ಯಕ್ಕೆ ಹಾಜರಾದ ಕೂಡಲೇ ಚರಾಸ್ತಿಗಳ ಮತ್ತು ಸ್ಥಿರಾ ವಿವರಣೆಯನ್ನು ತೋರಿಸುವ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

2) ಈ ನೇಮಕಾತಿಯು 1977ರ ಕರ್ನಾಟಕ ನಾಗರಿಕ ಸೇವೆಗಳು (ಪ್ರೊಬೇಷನರಿ) ನಿಯಮಾವಳಿಯ ವರ್ಷಗಳ ಪರೀಕ್ಷಾರ್ಥ ಅವಧಿಗೆ ಒಳಪಟ್ಟಿರುತ್ತದೆ. ಈ ಅವಧಿಯಲ್ಲಿ ತೃಪ್ತಿಕರ ಸೇವೆ ಸಲ್ಲಿಸಿ, ನಿ ಇಲಾಖಾ ಪರೀಕ್ಷೆಗಳಲ್ಲಿ ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಾಸು ಮಾಡು ಕಡ್ಡಾಯಗೊಳಿಸಲಾಗಿದೆ ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ / ವಿನಾಯಿತಿ ಪ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳುವುದು.

3) ಸರ್ಕಾರದ ಅಥವಾ ಸರ್ಕಾರದಿಂದ ಅಂಗೀಕೃತ ಹೊಂದಿದ ಸಂಸ್ಥೆಯಿಂದ ಒಂದು ವ ಅವಧಿಯೊಳಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಎಸ್ ಸಿಆರ್ 2008, ದಿನಾಂ 12-2012ರ ಆದೇಶದಂತೆ ಕಂಪ್ಯೂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಪ್ರಮಾಣ ಪತ್ರ ಸಲ್ಲಿಸುವುದು.

4) ಸದರಿಯವರು ಷರತ್ತು 2 ಮತ್ತು 3ನ್ನು ಪರೀಕ್ಷಾರ್ಥ ಅವಧಿ ಪೂರೈಸದಿದ್ದಲ್ಲಿ 1977ರ ಕನಾ ನಾಗರಿಕ ಸೇವೆಗಳು (ಪ್ರೊಬೇಷನರಿ) ನಿಯಮಾವಳಿಗಳ ನಿಯಮ 5(1)(ಬಿ) ರನ್ವಯ ಪಾಲಿ ಸೇವೆಯಿಂದ ಬಿಡುಗಡೆ ಮಾಡಲಾಗುವುದೆಂದು ತಿಳಿಯುವುದು.

5) ಈ ನೇಮಕಾತಿಯನ್ನು ಪಡೆಯಲು ಅಭ್ಯರ್ಥಿಯು ಯಾವುದಾದರೂ ನಕಲು ಇಲ್ಲವೇ ಫೋ ದಾಖಲಾತಿಗಳನ್ನು ಅಥವಾ ಸುಳ್ಳು ಮಾಹಿತಿಯನ್ನು ಸಲ್ಲಿಸಿರುವುದು ದೃಢಪಟ್ಟಲ್ಲಿ 2 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಅಧಿಕಾರಿ ಮತ್ತು ನೌಕರರುಗಳ ಸಾಮಾನ್ಯ ಪ ಮತ್ತು ನೇಮಕಾತಿ) ನಿಯಮಗಳು, 1977ರ ಸಾಮಾನ್ಯ ನೇಮಕಾತಿ ನಿಯಮಾವಳಿ ನಿಯಮ 1977ರ ಕರ್ನಾಟಕ ಮುನಿಸಿಪಲ್ ನಿಯಮಾವಳಿ ನಿಯಮ (25)ರ ರೀತ್ಯಾ ನೇಮಕಾತಿ ಹೊಂ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ನಗರ ಪಾಲಿಕೆಗೆ ವಂಚಿಸಿರುತ್ತಾರೆಂದು ಭಾ 1957ರ ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪಿ ನಿಯಮಾವಳಿಯ ನಿಯಮ 11ರ ರೀತಿ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು ಹ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದೆಂದು ತಿಳಿಯುವುದು.

6) ಪಿಂಚಣಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2 ದಿನಾಂಕ: 31-03-2006 ರಂತೆ, ಪಿಂಚಣಿಗೆ ಅರ್ಹರಿರುತ್ತೀರಿ.

7) ಸದರಿಯವರು ಅಗತ್ಯ ದಾಖಲೆಗಳನ್ನು ಕೂಡಲೇ ಒದಗಿಸಿ ನೂತನ ಪಿಂಚಣಿ ಯೋಜನೆ ನೊಂದಾಯಿಸಲು ಸೂಚಿಸಿದೆ ಹಾಗೂ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು PRAN ಸ ಸೃಜಿಸಲು ಹಾಗೂ ಕಟಾವಣೆಗೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ)

19/1

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿ

19/1/2024 19/1/24

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ/ಪೂರ್ವ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಲಯ / ಜಂಟಿ ಆಯುಕ್ತರು (ಕಂದಾಯ/ ಪೂರ್ವ) ರವರಿಗೆ ಕಳುಹಿಸಿದೆ.
: ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಉಪ ವಿಭಾಗ ಕಛೇರಿಗೆ ಅಭ್ಯರ್ಥಿಯ ಭಾವಚಿತ್ರದೊಂದಿಗೆ ಅಗತ್ಯಕ್ರಮಕ ಕಳುಹಿಸಿದೆ.
: ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ) ಉಪ ವಿಭಾಗ ರವರಿಗೆ ಮೃತ ನೌಕರರ ಸೇವಾಪುಸ್ತಕದೊಂದಿಗೆ ಕಳುಹಿಸಿದೆ.
: ಸಹಾಯಕ ಆಯುಕ್ತರು, ನೇಮಕಾತಿ ವಿಭಾಗ ರವರಿಗೆ ಕಳುಹಿಸಿದೆ.
: ಮು.ಲೆ.ಅ/ಮು.ಲೆ.ಪ/ಉ.ನಿ. (ಹಣಕಾಸು- ಪೂರ್ವ) ರವರಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿ
: ಅಭ್ಯರ್ಥಿಗೆ / ಕಛೇರಿ ಕಡತಕ್ಕೆ.

19/1/24
9488

ಸಂಖ್ಯೆ: 1328
ದಿನಾಂಕ: 06/02/2024